ಅಧ್ಯಕ್ಷರು .—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಪಟ್ಟಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) ...—ಮಾನ್ಯ ಅಧ್ಯಕ್ಷರೆ,

I ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ)ಅವರ ಪರವಾಗಿ.—

೧೯೬೪ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ ೨೨ನೇ ಕಲಮಿನ ಮೇರೆಗೆ.—

ಬಳ್ಳಾರಿ ಜಿಲ್ಲೆ ಹಡಗಲಿ ತಾಲ್ಲೂಕು, ಹೊಳಲು ಗ್ರಾಮದ ಶ್ರೀ ನೀಲಕಂಠೇಶ್ವರ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಸಂಬಂಧದಲ್ಲಿ ದಿನಾಂಕ ೨೪-೩-೧೯೯೪ ರಂದು ಹೊರಡಿಸಲಾದ ಹೆಚ್‌ಡಿ ೧೦೨ ಸಿಎನ್‌ಎಸ್ ೯೩ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) .—ಮಾನ್ಯ ಅಧ್ಯಕ್ಷರೆ,

II ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿ) ಅವರ ಪರವಾಗಿ.—

೧೯೫೭ನೇ ಸಾಲಿನ ಕರ್ನಾಟಕ ಮುದ್ರಾಂಕ ಅಧಿನಿಯಮ ೯(೨)ನೇ ಕಲಮಿನ ಮೇರೆಗೆ.—

೧. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ ಹಣಕಾಸು ನೆರವು ಮೂಲಕ ''ಭೂ ಒಡೆತನ ಯೋಜನೆ'' ಯಡಿಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ದೇವದಾಸಿ ಫಲಾನುಭವಿಗಳು ಭೂಮಿ ಖರೀದಿ ಸಂಬಂಧದಲ್ಲಿ ತಗಲುವ ಮುದ್ರಾಂಕ ಶುಲ್ಕವನ್ನು ವಿನಾಯಿತಿ ನೀಡುವ ಕುರಿತು ದಿನಾಂಕ ೧-೧-೧೯೯೪ ರಂದು ಹೊರಡಿಸಲಾದ ಕಂಇ ೪೭ ಇಎಸ್‌ಆರ್ ೯೧ನೇ ಕ್ರಮಾಂಕದ ಆದೇಶ.

೨. ಆಶ್ರಯ ಯೋಜನೆ ಹಾಗೂ ಡಾ॥ ಬಿ. ಆರ್. ಅಂಬೇಡ್ಕರ್ ಜನ್ಮ ಶತಾಬ್ದಿ ಕಾರ್ಯಕ್ರಮಗಳಡಿಯಲ್ಲಿ ಕೈಗೊಳ್ಳುವ ವಸತಿ ಯೋಜನೆಯ ಫಲಾನುಭವಿಗಳ ಮನೆ ದಸ್ತಾವೇಜುಗಳ ನೋಂದಣಿಗೆ ತಗಲುವ ಮುದ್ರಾಂಕ ಶುಲ್ಕವನ್ನು ಸಂಪೂರ್ಣವಾಗಿ ವಿನಾಯಿತಿ ನೀಡುವುದರ ಕುರಿತು ದಿನಾಂಕ ೨೫-೨-೧೯೯೪ ರಂದು ಹೊರಡಿಸಲಾದ ಕಂಇ ೩೭ ಇಎಸ್‌ಆರ್ ೯೪ನೇ ಕ್ರಮಾಂಕದ ಆದೇಶ.

೩. ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಪತಿಯಿಂದ ಪಡೆಯುವ ೧೬೬.೭೫ ಎಕರೆ ಜಮೀನಿಗೆ ವಂಗಳೂರು ವೀಫೈನರೀಸ್ ಅಂಡ್ ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್ ಬರೆದು ಕೊಡುವ ಲೀಸ್-ಕಂ-ಸೇಲ್ ದಸ್ತಾವೇಜಿನ ನೋಂದಣಿಗೆ ತಗಲುವ ಮುದ್ರಾಂಕದ ಶುಲ್ಕವನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ ೧೧-೩-೧೯೯೪ ರಂದು ಹೊರಡಿಸಲಾದ ಆರ್‌ಡಿ ೨೦೩ ಇಎಸ್‌ಆರ್ ೯೧ನೇ ಕ್ರಮಾಂಕದ ಆದೇಶಗಳನ್ನು ಮಂಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) ,—ಮಾನ್ಯ ಅಧ್ಯಕ್ಷರೆ.

III ಶ್ರೀ ಭೀಮಣ್ಣ ಖಂಡ್ರೆ(ಸಾರಿಗೆ ಮಂತ್ರಿ)ಅವರ ಪರವಾಗಿ. —

೧೯೫೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮದ ೧೬(೨)ನೇ ಕಲಮಿನ ಮೇರೆಗೆ.—

೧. ಮೆ॥ ಆಣ್ಣಾ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಲಿಮಿಟೆಡ್, ತಮಿಳುನಾಡು ಇವರ ೫ ವಾಹನಗಳಿಗೆ ಸಿಂಗಲ್ ಪಾಯಿಂಟ್ ತೆರಿಗೆ ಆಧಾರದ ಮೇಲೆ ತೆರಿಗೆ

ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ ೩-೧-೧೯೯೪ರಂದು ಹೊರಡಿಸಲಾದ ಹೆಚ್‌ಟಿಡಿ ೧೮೦ ಟಿಎಂಟಿ ೯೩ನೇ ಕ್ರಮಾಂಕದ ಅಧಿಸೂಚನೆ;

೨. ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಿಗೆ ಕರ್ನಾಟಕ ಗಡಿಯಲ್ಲಿ ೨೦ ಕಿ.ಮೀ. ಒಳಗೆ ಓಡಾಡಿಸುವುದರ ಸಂಬಂಧದಲ್ಲಿ ತೆರಿಗೆ ವಿನಾಯಿತಿ ಹಾಗೂ ಅನುಮತಿ ನೀಡುವುದರ ಕುರಿತು ದಿನಾಂಕ ೨೨-೨-೧೯೯೪ರಂದು ಹೊರಡಿಸಲಾದ ಹೆಚ್‌ಟಿಡಿ ೧೬೭ ಟಿಎಂಟಿ ೯೩ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

IV ಡಾ॥ ಆರ್. ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಮಂತ್ರಿ).—ಮಾನ್ಯ ಅಧ್ಯಕ್ಷರೆ, ೧೯೫೬ನೇ ಸಾಲಿನ ಕಂಪನಿಗಳ ಅಧಿನಿಯಮದ ೬೧೯(ಎ) ಕಲಮಿನ ಮೇರೆಗೆ.—

ಮೈಸೂರಿನ ಕಾವೇರಿ ಜಲಾಯನ ಪ್ರತ ನೀರಾವರಿ ನಿಗಮದ ೧೯೯೦-೯೧ನೇ ಸಾಲಿನ ಖಾಲ್ಕನೆಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) .—ಮಾನ್ಯ ಅಧ್ಯಕ್ಷರೆ,

V ಶ್ರೀ ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿ) ಅವರ ಪರವಾಗಿ .—

೧೯೮೦ನೇ ಸಾಲಿನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾಯ್ದೆಯ ೨೫ನೇ ಕಲಮಿನ ಮೇರೆಗೆ.—

೧. ಮುನಿರಾಬಾದಿನಲ್ಲಿರುವ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆಯ ೧೯೯೨-೯೩ನೇ ಸಾಲಿನ ವಾರ್ಷಿಕ ವರದಿ.

೨. ಮೈಸೂರಿನಲ್ಲಿರುವ ಅಚ್ಚುಕಟ್ಟು ಪ್ರಾಧಿಕಾರ ಕಾವೇರಿ ಜಲಾಯನ ಯೋಜನೆಗಳ ೧೯೯೨-೯೩ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) . —ಮಾನ್ಯ ಅಧ್ಯಕ್ಷರೆ,

VI ಶ್ರೀ ರಾಮಲಿಂಗಾರೆಡ್ಡಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಮಂತ್ರಿ) ಅವರ ಪರವಾಗಿ .—

೧೯೫೬-ನೇ ಸಾಲಿನ ಕಂಪನಿಗಳ ಅಧಿನಿಯಮದ ೬೧೯(ಎ) ಕಲಮಿನ ಮೇರೆಗೆ.—

೧೯೯೨-೯೩ನೇ ಸಾಲಿನ ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ೪೭ನೆಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು.—ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಎಂ. ಪಿ. ವೆಂಕಟೇಶ್.—ಮೈಸೂರು ಜಿಲ್ಲೆ ಕೆ. ಆರ್. ನಗರ ತಾಲ್ಲೂಕು ಮಿರ್ಲೆ ಗ್ರಾಮದಲ್ಲಿನ ವಿಫಲವಾದ ಬಾವಿಗೆ ಸಾಲವನ್ನು ಮನ್ನಾ ಮಾಡುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯ ಅಧ್ಯಕ್ಷನಾದ ನಾನು ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು ಹರಟೆ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಶ್ರೀ ಕಣ್ಣಪ್ಪ ಅವರ ಮೇಲೆ ನಡೆಯಿತೆನ್ನಲಾದ ಹಲ್ಲೆ ಮತ್ತು ಮಲ ತಿನ್ನಿಸಲಾಯಿತು ಎಂಬುದರ ಬಗ್ಗೆ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.